

**ಎಡದಿಂದ ಬಲಕ್ಕೆ:**

1. ಅಂದಗಾತಿಯ ಬೆನ್ನು ಹತ್ತಿದ್ದಕ್ಕೆ ಇಂಥ ಕೀಳು ದೆಶೆ 4
3. ಅಭ್ಯಾಸ ಮಾಡಿದ್ದು ಸಾಕಾಗದಿದ್ದರೆ ಎಲ್ಲ ಅನರ್ಥ 3
4. ಸುಂದರ ಮನೆಗೆ ತಕ್ಕಂತಿದೆ ಅದರ ಹೊಳಪು 3
6. ಈ ವರ್ಷ ಅಭಾವ ಬರುವ ಸಾಧ್ಯತೆ ಇಲ್ಲ 4
8. ಮಂದಿರವನ್ನು ನಿರ್ಮಿಸುತ್ತಿರುವವರ ಪ್ರತಿ ಸ್ವರವೂ ಕೇಳಿಸಿತ್ತು ಮತ್ತೆ ಮತ್ತೆ 4
10. ಸಂಬಂಧವನ್ನು ಸರಿ ಮಾಡಿದ ನಂತರವಷ್ಟೇ ನೆಮ್ಮದಿ 4
12. ತಾಳವಾದ್ಯ ನುಡಿಸುವವರ ಕೈಯಲ್ಲೇಕೆ ಭಾರೀ ಕತ್ತಿ? 4
16. ಅಲ್ಲಿಗೆ ತೆರಳುವ ಮೊದಲು ಚಿಗುರೆಲೆ ಬೇಕು 3
17. ಎಂಥ ಮೂರ್ಖತನ! ಅಯ್ಯೋ ಪಾಪ ಎನಿಸುತ್ತದೆ 3
18. ಪ್ರಾರ್ಥನೆಯ ಈ ವಿಧಾನ ತುಂಬ ಪ್ರಾಚೀನ 4

**ಮೇಲಿಂದ ಕೆಳಕ್ಕೆ:**

1. ಆತನಿಗೆ ಅತ್ಯಾಸೆ ಎಂಬ ಅಭಿಪ್ರಾಯ ಖಂಡಿತ ಸುಳ್ಳು 3
2. ಮಾರುತಿಗೆ ಕಿಂಚಿತ್ತೂ ಇರಲಿಲ್ಲ, ಸೊಕ್ಕು 3
3. ಭಾರೀ ಅಬ್ಬರ ಕಾಣುತ್ತಿದೆ. ಏಕೆಂದರೆ ಅದು ಇನ್ನೂ ಈಗ ಶುರು 3
5. ಗಂಟು ಕದ್ದವರು ಕಂಡೊಡನೆ ಗೂಳಿಯ ಕೂಗು 3
6. ಈ ಬಗೆಯ ಅನ್ಯಾಯವನ್ನು ಸರಿಪಡಿಸಲು ಕಿಂಚಿತ್ತೂ ಶ್ರಮ ಇಲ್ಲ 4
7. ವರದಿಯನ್ನು ಮಾನ್ಯ ಮಾಡಿದ್ದಕ್ಕೆ ಇಂಥ ಅಭಿವೃದ್ಧಿ 4
8. ಮಕರಂದ ತಂದಿದ್ದಕ್ಕೆ ಬಹುಮಾನ ಈ ರತ್ನ ಮಣಿ 4
9. ನಿಶ್ಚಿತವಾಗಿ ಬರುವ ಆ ಪ್ರಾಣಿ ಇರುಳಿನ ಜೀವಿ 4
11. ದೇವತಾ ಪೂಜೆಗೆ ಧಾವಿಸಿ ಬರುವಂಥ ಆತುರವೇ? 3
13. ಕಳ್ಳ ಜನರ ಕೆಲಸ ತಲೆ ಕೆಳಕಾದರೂ ಎಷ್ಟು ಭಯಂಕರ! 3
14. ಪಹರೆ ಕೆಲಸವೆಂದರೆ ಆತನಿಗೆ ಭಾರೀ ಉತ್ಸಾಹ 3
15. ಮುಂದೆ ನಿಂತವರನ್ನೆಲ್ಲ ಹೀಗೆ ತುಳಿದು ಹಾಕುವುದೇ? 3

---

## 30-01-2020 ಉತ್ತರಗಳು

**ಎಡದಿಂದ ಬಲಕ್ಕೆ:**

1. ಉಪಯೋಗ 3. ಸಲೀಸು 4. ಟಾಕೀಸು 6. ರುಚಿಕರ 7. ಅವನತಿ 9. ಅತಿರೇಕ 11. ತಕರಾರು 13. ರಣರಂಗ 15. ಅನಾಯಾಸ 17.ಭವನ 18. ದಶಕ 19. ತಿರಸ್ಕಾರ

**ಮೇಲಿಂದ ಕೆಳಕ್ಕೆ:**

1. ಉಸುರು 2. ಗಟಾರ 3. ಸಜ್ಜನ 5. ಸುಸ್ಥಿತಿ 7. ಅನಂತ 8. ತಿಮಿರು 9. ಅಸ್ಥಿರ 10. ಕಡಗ 12. ರಾಸಭ 14. ಣರಕ (ಕರಣ ತಲೆಕೆಳಗು) 15. ಅನತಿ 16. ಸದರ

ಪ್ರಶ್ನಾ ಒಕಣ

# ತಿಮಿಂಗಿಲ ಗಾಯನ: ಏನು ಕಾರಣ?

ತಿಮಿಂಗಿಲ: ಸಸ್ತನಿ ವರ್ಗದ 'ಸಿಟೇಶಿಯಾ' ಉಪವರ್ಗಕ್ಕೆ ಸೇರಿದ ಪ್ರಾಣಿಗಳು ಅವು (ಚಿತ್ರ ನೋಡಿ). ತಿಮಿಂಗಿಲಗಳಲ್ಲಿ ಪ್ರಸ್ತುತ 90 ಪ್ರಭೇದಗಳಿವೆ. ಬಹುಪಾಲು ಅವೆಲ್ಲವೂ ಸಾಗರ ವಾಸಿಗಳಾಗಿವೆ. ತಿಮಿಂಗಿಲಗಳನ್ನು ದ್ವಿವಿಧಗಳನ್ನಾಗಿ ವರ್ಗೀಕರಿಸಲಾಗಿದೆ: 'ಹಲ್ಲಿನ ತಿಮಿಂಗಿಲಗಳು ಮತ್ತು ಬಲೀನ್ ತಿಮಿಂಗಿಲಗಳು'. ಬಲೀನ್ ತಿಮಿಂಗಿಲಗಳಲ್ಲಿ 15 ಪ್ರಭೇದಗಳಿವೆ: ನೀಲಿ ತಿಮಿಂಗಿಲ, ಬೂದು ತಿಮಿಂಗಿಲ, ಸ್ಪರ್ಮ್ ತಿಮಿಂಗಿಲ, ಗೂನು ತಿಮಿಂಗಿಲ... ಇತ್ಯಾದಿ. ಅವೆಲ್ಲವೂ ಬೃಹದಾಕಾರದ ಶರೀರವನ್ನು ಪಡೆದಿವೆ; ಅದ್ಭುತ ಗಾಯಕರೂ ಆಗಿವೆ!

ವಾಸ್ತವವಾಗಿ ಎಲ್ಲ ತಿಮಿಂಗಿಲಗಳೂ ವಿವಿಧ ಉದ್ದೇಶಗಳಿಗಾಗಿ ಧ್ವನಿ ಸಂಕೇತಗಳನ್ನು ಬಳಸುತ್ತವೆ. 'ಕ್ಲಿಕ್' ಶಬ್ದಗಳು ಮತ್ತು ಸೀಟಿ ಸದ್ದುಗಳನ್ನು ಅವು ಹೊರಡಿಸುತ್ತವೆ; ವಿಶಿಷ್ಟ ಭಾಷೆಯಂತೆ ಅವನ್ನು ಬಳಸುತ್ತವೆ; ಇತರರೊಡನೆ ಸಂಪರ್ಕಕ್ಕೆ, ಸಮಾಚಾರ ವಿನಿಮಯಕ್ಕೆ ಮತ್ತು ತಮ್ಮ ಭಾವನೆಗಳ ಅಭಿವ್ಯಕ್ತಿಗೆ ಉಪಯೋಗಿಸುತ್ತವೆ. ಆದರೆ ಬಲೀನ್ ತಿಮಿಂಗಿಲಗಳು ಮಾತ್ರ, ಅವುಗಳಲ್ಲೂ ಗಂಡು ತಿಮಿಂಗಿಲಗಳು ಮಾತ್ರ, 'ಹಾಡುತ್ತವೆ' ಕೂಡ! ಮನುಷ್ಯರಂತೆಯೇ ಪ್ರತಿ ತಿಮಿಂಗಿಲವೂ ತನ್ನದೇ ವಿಶಿಷ್ಟ ಧ್ವನಿಯ ಮೂಲಕ ಗಾಯನ ಮಾಡುತ್ತದೆ. ಹ್ರಸ್ವ ದೀರ್ಘ ಸ್ವರಗಳನ್ನು ಬಳಸಿ, ವಿಶೇಷ ಏರಿಳಿತಗಳನ್ನು ಬೆರೆಸಿ ಹೊಮ್ಮಿಸುವ ಮಂದ್ರ ಸ್ಥಾಯಿಯ ಈ ಹಾಡುಗಳು ಕಡಲ ನೀರಲ್ಲೂ ನೂರಾರು ಕಿಲೋ ಮೀಟರ್ ದೂರ ಹರಿಯುತ್ತವೆ. ಇತರ ತಿಮಿಂಗಿಲಗಳಿಗೆ ಹಾಡುಗಾರನ ನೆಲೆ, ಗುರುತು ಮತ್ತು ಹಾಡಿನ ಉದ್ದೇಶಗಳ ವಿವರಗಳನ್ನು ಅರುಹುತ್ತವೆ.



ತಿಮಿಂಗಿಲಗಳ ಗಾಯನಕ್ಕೆ ನಾನಾ ಉದ್ದೇಶಗಳಿವೆ. ಪ್ರಮುಖವಾಗಿ:

- ಸಂತಾನೋತ್ಪತ್ತಿಯ ಕಾಲದಲ್ಲಿ ವಯಸ್ಕ ಗಂಡು ಬಲೀನ್ ತಿಮಿಂಗಿಲಗಳು ತಮ್ಮ ವಿಶೇಷ 'ಪ್ರಣಯ ಗೀತೆ'ಗಳನ್ನು ಮನ ತುಂಬಿ ಹಾಡುತ್ತವೆ. ಆ ಮೂಲಕ ತಮ್ಮ ಮನದ ಇಚ್ಛೆಯನ್ನೂ, ತಮ್ಮ ಶಕ್ತಿಯನ್ನೂ, ಆರೋಗ್ಯವನ್ನೂ, ತಾವಿರುವ ಸ್ಥಳವನ್ನೂ ಹೆಣ್ಣುಗಳಿಗೆ ಅರುಹುತ್ತವೆ. ಅದನ್ನೆಲ್ಲ ಗ್ರಹಿಸಿ ಇಷ್ಟಪಟ್ಟು ಒಪ್ಪುವ ಸಂಗಾತಿಯನ್ನು ಪಡೆಯುತ್ತವೆ.
- ಒಂದೇ ಗುಂಪಿಗೆ ಸೇರಿದ, ಆದರೆ ಕಡಲಲ್ಲಿ ದೂರ ದೂರ ಹರಡಿದ ತಿಮಿಂಗಿಲಗಳು ಸಮೃದ್ಧ ಆಹಾರ ಕಂಡಾಗ ಅಥವಾ ಗಂಭೀರ ಅಪಾಯ ಒದಗಿದಾಗ ಆ ಸುದ್ದಿಯನ್ನು ವಿಶೇಷ ಸಂಯೋಜಿತ ಹಾಡಿನ ಮೂಲಕ ಪ್ರಸಾರ ಮಾಡುತ್ತವೆ ; ಕೂಡಲೇ ದೂರ ದೂರ ಚದುರಿದ್ದ ಗುಂಪಿನ ಸದಸ್ಯರೆಲ್ಲ ಒಗ್ಗೂಡುತ್ತವೆ.
- ಆಶ್ಚರ್ಯ ಏನೆಂದರೆ, ಒಂಟಿಯಾದ ತಿಮಿಂಗಿಲಗಳು ಆಹಾರ ಸೇವಿಸುವಾಗಲೂ ಹಾಡುತ್ತವೆ; ಒಂಟಿತನದ ಬೇಸರವನ್ನು ಕಳೆಯಲೂ ಹಾಡುತ್ತವೆ; ಪ್ರೀತಿಯ ಜೊತೆಗಾರರು ಅಗಲಿದರೂ, ಮೃತರಾದರೂ ದುಃಖದಿಂದ ಹಾಡುತ್ತವೆ. ಇಂಥ ಹಾಡುಗಳು ಸಂಪೂರ್ಣ ವಿಭಿನ್ನವಾಗಿದ್ದು ಐದು ನಿಮಿಷದಿಂದ ಮುವ್ವತ್ತು ನಿಮಿಷದಷ್ಟು ದೀರ್ಘವಾಗಿರುತ್ತವೆ. ಎಂಥ ಸೋಜಿಗ! ಅಲ್ಲವೇ?

■ ಎನ್. ವಾಸುದೇವ್